ಜೊಲ್ಲೆ ಗ್ರೂಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಜನೇವರಿ 2023–ಸಂಪುಟ–7 ಸಂಚಿಕೆ–02

# ದರ್ಪಣ



# ಪ್ರೇರಣಾ ಉತ್ಸವ–2022–23

ಪಟ್ಟಣದ ಜೊಲ್ಲೆ ಗ್ರುಪ್ ವತಿಯಿಂದ ನಾಲ್ಕು ದಿನಗಳರವರೆಗೆ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಯವರ ಜನ್ಮದಿನದ ಪ್ರಯುಕ್ತ ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ ಶಾಲೆ (ಸಿ.ಬಿ.ಎಸ್.ಇ) ನಣದಿ ಕ್ಯಾಂಪಸ್‌ನಲ್ಲಿ ಪ್ರೇರಣಾ ಉತ್ಸವಕ್ಕೆ ಚಿಂಚಣಿಯ ಅಲ್ಲಮಪ್ರಭು ಸ್ವಾಮಿಗಳು ಮತ್ತು ಹುಕ್ಕೇರಿಯ ಶಿವಬಸವ ಸ್ವಾಮಿಗಳು ಸಸಿಗಳಿಗೆ ನೀರು ಹಾಕುವುದರ ಮೂಲಕ ಚಾಲನೆ ನೀಡಿದರು.

ಯಕ್ಸಂಬಾದ ಜೊಲ್ಲೆ ಉದ್ಯೋಗ ಸಮೂಹದಿಂದ ಆಯೋಜಿಸಲಾದ 11 ನೇ ವರ್ಷದ ಪ್ರೇರಣಾ ಉತ್ಸವದ ಅಂಗವಾಗಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮಿಕೊಳ್ಳಲಾಗಿತ್ತು. ವಿವಿಧ ಶಾಲೆಯ ವಿದ್ಯಾರ್ಥಿಗಳಿಂದ ಚಿತ್ರಕಲಾ ಸ್ಪರ್ಧೆ, ಕ್ರಾಫ್ಟ್ ಸ್ಪರ್ಧೆ ಹಾಗೂ ಮಹಿಳೆಯರಿಗಾಗಿ ಶಾಖಾಹಾರಿ ಅಡುಗೆ ಪದಾರ್ಥಗಳ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಲಾಯಿತು. ಬಳಿಕ ಕಾರದಗಾ ಗ್ರಾಮದ ಕಾರ್ಯಕರ್ತರು ಪ್ರಕಟಿಸಿದ ನಿಪ್ಪಾಣಿ ಮತಕ್ಷೇತ್ರದ ಅಭಿವೃದ್ಧಿ ಬಗ್ಗೆ ನೂತನ ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು.

"ಪ್ರತಿವರ್ಷ ಜ್ಯೋತಿಪ್ರಸಾದ ಜೊಲ್ಲೆಯವರ ಹುಟ್ಟುಹಬ್ಬದ ನಿಮಿತ್ಯ ಪ್ರೇರಣಾ ಉತ್ಸವ ಆಚರಿಸುವುದರ ಮೂಲಕ ಜೊಲ್ಲೆ ಗ್ರೂಪ್ ಗಡಿನಾಡು ಯಕ್ಸಂಬಾದಲ್ಲಿ ಒಂದೇ ಸೂರಿನಡಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ" ಎಂದು ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದ ಪ.ಪೂ. ಸದ್ಗುರು ಡಾ. ಅಭಿನವ ಬ್ರಹ್ಮಾನಂದ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು.

"ಸಮಾಜ ಜೀವಿಯಾದ ಮನುಷ್ಯ ಸಮಾಜ ಕಟ್ಟಿಕೊಳ್ಳಲು ಎಲ್ಲರನ್ನು ಒಂದುಗೂಡಿಸಿ ಸಾಮಾಜಿಕ, ಧಾರ್ಮಿಕ ಪರಂಪರೆ ಬೆಳೆಸುವುದರ ಜೊತೆಗೆ ಭಾರತೀಯ ಸಂಸ್ಕೃತಿ. ಸಂಸ್ಕಾರ ನೀಡಿ  ಪ್ರೇರಣೆ ನೀಡುವುದು ಅವಶ್ಯಕ" ಎಂದು ಕನ್ಹೇರಿ ಸಿದ್ದಗಿರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಹೇಳಿದರು.


ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಜನ್ಮದಿನದ ಅಂಗವಾಗಿ ಜೊಲ್ಲೆ ಪರಿವಾರ ಪ್ರೇರಣಾ ಉತ್ಸವ ನಡೆಸುತ್ತಾರೆ. ಮಗನ ಜನ್ಮದಿನಕ್ಕೆ ತಂದೆ–ತಾಯಿ ವಿಶಿಷ್ಟ ಸಾಧಕರನ್ನು ಗುರುತಿಸಿ ಪ್ರೇರಣೆ ನೀಡುವ ಕಾರ್ಯ ಶ್ಲಾಘನೀಯ ಎಂದರು. ಉದ್ಯೋಗ. ವ್ಯವಹಾರ. ನೃತ್ಯ. ಕಂಠಪಾಠ ಸ್ಪರ್ಧೆ ಹೀಗೆ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಪ್ರೇರಣೆ ನೀಡಿ ಸಮಾಜದ ಕಟ್ಟ ಕಡೆ ವ್ಯಕ್ತಿಗಳನ್ನು ಗುರುತಿಸಿ ಸಾಮಾಜಿಕ ಕಾರ್ಯ ಮಾಡುವ ಜೊಲ್ಲೆ ದಂಪತಿಗಳು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರು.

ಮುಜರಾಯಿ ಹಜ್ ಮತ್ತು ವಕ್ಫ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಅಧ್ಯಕ್ಷತೆ ವಹಿಸಿ 30 ವರ್ಷಗಳಿಂದ ಚಿಕ್ಕ ಹಳ್ಳಿಯಲ್ಲಿ ಸಂಸ್ಥೆ ಹುಟ್ಟು ಹಾಕಿ ಇಂದು ಬೀರೇಶ್ವರ ಸಂಸ್ಥೆ ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಜೊಲ್ಲೆ ಗ್ರೂಪ್ ಸಮಾಜಿಕ ಕಾರ್ಯ ಮಾಡುತ್ತಾ ಬರುತ್ತಿದೆ ಎಂದು ಹೇಳಿದರು. ಭಾರತಿ ಕ್ರಿಕೆಟ್ ತಂಡದ ದಿವ್ಯ ಚೇತನ ಆಟಗಾರ ಸುನೀಲ ರಮೇಶ ಅವರಿಗೆ ಪ್ರಸಕ್ತ ಸಾಲಿನ ಪ್ರೇರಣಾ ಪುರಸ್ಕಾರ ಹಾಗೂ 51 ಸಾವಿರ ರೂ. ನೀಡಿ ಗೌರವಿಸಿದರು.

"ಚಿಕ್ಕೋಡಿ ಸಂಸದರು ಹಾಗೂ ಜೊಲ್ಲೆ ಗ್ರೂಪ್‌ನ ಸಂಸ್ಥಾಪಕರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಯವರು ಜೊಲ್ಲೆ ಗ್ರೂಪ್ ಸಮಾಜದ ಸರ್ವಾಂಗಿನ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿದೆ" ಎಂದುರು.

## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




## ಪ್ರೇರಣಾ ಪುರಸ್ಕಾರ



ಪ್ರೇರಣಾ ಉತ್ಸವದ ಕಾರ್ಯಕ್ರಮದಲ್ಲಿ ಕನ್ಹೇರಿಯ ಜಗದ್ಗುರು ಪ.ಪೂ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಅಥಣಿಯ ಪ.ಪೂ ಶಿವಬಸವ ಗುರುಮುರುಘರಾಜೇಂದ್ರ ಸ್ವಾಮೀಜಿ, ಹುಕ್ಕೇರಿ ಪ.ಪೂ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹಾಗೂ ಪ.ಪೂ ಅಭಿನವ ಮಂಜುನಾಥ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಅಂಧರ ವಿಶ್ವಕಪ್ ಟಿ–20 ವಿಜೇತ ಭಾರತ ತಂಡದ ಉಪನಾಯಕ, ದಿವ್ಯ ಚೇತನ ಕ್ರಿಕೆಟ್ ಆಟಗಾರ ಸುನೀಲ್ ರಮೇಶ ಅವರಿಗೆ ಜೊಲ್ಲೆ ಗ್ರೂಪ್ ವತಿಯಿಂದ ಪ್ರೇರಣಾ ಪುರಸ್ಕಾರ ಹಾಗೂ 51,000/– ರೂ ನಗದು ನೀಡಿ ಗೌರವಿಸುತ್ತಿರುವ ದೃಶ್ಯ.

ಪ.ಪೂ ಶ್ರೀ. ಮ.ನಿ.ಪ್ರ.ಸ್ವ. ಶ್ರೀ. ಶಿವಲಿಂಗೇಶ್ವರ ಮಹಾಸ್ವಾಮೀಜಿ ನಿಡಸೋಸಿ, ಹುಕ್ಕೇರಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅಥಣಿ ಶಿವಬಸವ ಗುರುಮುರಘರಾಜೇಂದ್ರ ಸ್ವಾಮೀಜಿ, ಕ್ಯಾರಗುಡ್ಡ ಹುಕ್ಕೇರಿಯ ಅಭಿನವ ಮಂಜುನಾಥ ಸ್ವಾಮೀಜಿ, ಗುರುಮಟ್ಕಲ್ ಶಾಂತವೀರ ಸ್ವಾಮೀಜಿ, ಬಸವ ಜ್ಯೋತಿ ಯೂಥ್ ಪೌಂಡೇಶನ ಅಧ್ಯಕ್ಷ ಕು. ಬಸವಪ್ರಸಾದ ಜೊಲ್ಲೆ, ಹುಬ್ಬಳ್ಳಿ ಕೆಓಎಫ್ ಅಧ್ಯಕ್ಷ ಶ್ರೀ. ಬಸವರಾಜ ತೇಲಿ, ಶ್ರೀ ಕಲ್ಲಪ್ಪಣ್ಣಾ ಜಾಧವ, ನಿಪ್ಪಾಣಿ ನಗರಸಭೆ ಅಧ್ಯಕ್ಷ ಶ್ರೀ. ಜಯವಂತ ಬಾಟಲೆ, ನೀತಾ ಬಾಗಡೆ, ಶ್ರೀ ರಾಜು ಗುಂದೆ, ಶ್ರೀ. ಪ್ರಣವ ಮಾನ್ವಿ, ಶ್ರೀ. ರಾಘವೇಂದ್ರ ಬಗಾಡೆ, ಜೊಲ್ಲೆ ಗ್ರುಪ್‌ನ ಸಿಇಓ ಶ್ರೀ. ವಿವೇಕಾನಂದ ಬಂಕೋಳ್ಳಿ. ಸೌ. ಪ್ರೀಯಾ ಜೊಲ್ಲೆ, ಶ್ರೀ. ಅಪ್ಪಾಸಾಹೇಬ ಜೊಲ್ಲೆ, ಶ್ರೀ. ಸಿದ್ರಾಮ ಗಡದೇ ಮುಂತಾದವರು ಉಪಸ್ಥಿತರಿದ್ದು ಪ್ರೇರಣಾ ಉತ್ಸವದ ಸುಯಶಸ್ವಿಗಾಗಿ ಶ್ರಮಿಸಿದರು.

ಸಮಾರೋಪ ಸಮಾರಂಭದಲ್ಲಿ ಲಿಂಗೈಕ್ಯರಾದ ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿ ಭಾವಚಿತ್ರಕ್ಕೆ ಕನ್ನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ. ಸಚಿವೆ ಶಶಿಕಲಾ ಜೊಲ್ಲೆ ಮತ್ತು ವಿವಿಧ ಸ್ವಾಮೀಜಿಗಳು ಪುಷ್ಪ ನಮನ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಪ್ರೇರಣಾ ಉತ್ಸವ-2022-23 ವಿವಿಧ ದೃಶ್ಯಗಳು



# ವಿಶ್ವ ಮಣ್ಣು ದಿನದ ಮಹತ್ವ, ಉದ್ದೇಶ

ಡಿಸೆಂಬರ್ 5 ವಿಶ್ವ ಮಣ್ಣು ದಿನ. ನಮ್ಮ ಬದುಕಿನ ಎಲ್ಲ ಸ್ತರಗಳಲ್ಲೂ ಪೂರಕವಾಗಿರುವ ಮಣ್ಣು ಇಂದು ವಿವಿಧ ಮಾಲಿನ್ಯಗಳಿಂದಾಗಿ ಕಲುಷಿತಗೊಳ್ಳುತ್ತಿದೆ. ಅದರ ಪೋಷಕಾಂಶ ಮಟ್ಟ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಣ್ಣಿನ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ಡಿ.5ರಂದು ವಿಶ್ವ ಮಣ್ಣು ದಿನವನ್ನು ಆಚರಿಸಲಾಗುತ್ತದೆ.

**ಏನಿದು ವಿಶ್ವ ಮಣ್ಣು ದಿನ**

ಇಂಟರ್ ನ್ಯಾಷನಲ್ ಯೂನಿಯನ್ ಆಫ್ ಸಾಯ್ಲ್ ಸೈನ್ಸ್ (ಐಯುಎಸ್‌ಎಸ್) 2002ರಲ್ಲಿ ಮಣ್ಣಿನ ಪ್ರಾಮುಖ್ಯತೆ ಬಗ್ಗೆ ಪ್ರಚುರಪಡಿಸಲು ಡಿ. 5ರಂದು ವಿಶ್ವ ಮಣ್ಣು ದಿನ ಆಚರಿಸಲು ನಿರ್ಧರಿಸಿತು. ಇದೇ ಸಮಯದಲ್ಲಿ 2012 ಡಿಸೆಂಬರ್ 20ರಂದು ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಆಹಾರ ಭದ್ರತೆ, ಹವಾಮಾನ ವೈಪರೀತ್ಯ, ಸುಸ್ಥಿರ ಅಭಿವೃದ್ಧಿಗೆ ಮಣ್ಣಿನ ಕೊಡುಗೆಯನ್ನು ಪರಿಗಣಿಸಿ ಡಿ. 5 ವಿಶ್ವ ಮಣ್ಣು ದಿನವಾಗಿ ಆಚರಿಸಲು ಘೋಷಿಸಿತು . ಅಂದಿನಿಂದ ಪ್ರತಿ ವರ್ಷ ವಿಶ್ವ ಮಣ್ಣು ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

**ಏನಿದು ಮಣ್ಣು?**

ಮಣ್ಣು ಎಂಬುದು ಘನ, ದ್ರವ ಹಾಗೂ ಅನಿಲ ರೂಪದ ವಸ್ತುಗಳಿಂದ ಕೂಡಿರುವ ಸಂಕೀರ್ಣ ವ್ಯವಸ್ಥೆ. ಈ ಘನವಸ್ತುಗಳು ವ್ಯತ್ಯಾಸ ಹೊಂದುವ ಖನಿಜ ವಸ್ತುಗಳನ್ನು ಒಳಗೊಂಡಿರುತ್ತದೆ. ಈ ಖನಿಜ ವಸ್ತುಗಳು ಕಣ್ಣಿಗೆ ಕಾಣುವ ಹಾಗೂ ಕಾಣದಷ್ಟು ಸೂಕ್ಷ್ಮವಾಗಿಯೂ ಇರುತ್ತವೆ. ಲಕ್ಷಾಂತರ ನಿರ್ಜೀವಿ ಹಾಗೂ ಸಜೀವಿ ಸೂಕ್ಷ್ಮ ಜೀವಿಗಳನ್ನು ಒಳಗೊಂಡಿರುತ್ತದೆ. ಗಾಳಿ ಮತ್ತು ನೀರು ಮಣ್ಣಿನಲ್ಲಿರುವ ನಿರ್ವಾತವನ್ನು ಆಕ್ರಮಿಸುತ್ತವೆ. ಮಣ್ಣಿನ ಸಾಮರ್ಥ್ಯವೇ ಜೀವ ಸೃಷ್ಟಿಗೆ ಕಾರಣವಾಗಿದೆ.

**ಮಣ್ಣಿನ ಮಹತ್ವ**

ಮಣ್ಣು ಭೂಮಿಯ ಮೇಲ್ಮೈ ಪದರವಾಗಿದ್ದು, ಸಾವಯವ ಮತ್ತು ಅಜೈವಿಕ ವಸ್ತುಗಳನ್ನು ಒಳಗೊಂಡಿದೆ. ಸಸ್ಯಗಳ ಬೆಳವಣಿಗೆಗೆ ನೆರವು ನೀಡುವ ಮಣ್ಣು ಜಗತ್ತಿನ ಆಹಾರ ಭದ್ರತೆಗೆ ಮಹತ್ತರ ಕೊಡುಗೆ ನೀಡುತ್ತಿದೆ. ಮಣ್ಣಿಲ್ಲದೆ ಜೀವ ಸಂಕುಲವಿಲ್ಲ ಎಂದರೆ ಅದರ ಮಹತ್ವ ಎಷ್ಟಿರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

**ಆಚರಣೆ ಹೇಗೆ?**

ಇಂದಿನ ಮಾಲಿನ್ಯದ ಯುಗದಲ್ಲಿ ಮಣ್ಣಿನ ಫಲವತ್ತತೆಯನ್ನು ಉಳಿಸಿಕೊಳ್ಳುವುದು ಒಂದು ಸವಾಲಾಗಿದೆ. ಆದರೆ ಮನುಕುಲದ ಭವಿಷ್ಯದ ದೃಷ್ಟಿಯಿಂದ ಇಂದಿನಿಂದಲೇ ಮಣ್ಣಿನ ಮೇಲೆ ಮತ್ತಷ್ಟು ಕಾಳಜಿ ಮೂಡಿಸುವ ದೃಷ್ಟಿಯಯಿಂದ ಅಂತಾರಾಷ್ಟ್ರೀಯ ಭೂ ವಿಜ್ಞಾನ ಸಂಘ ಸೇರಿದಂತೆ ಹಲವಾರು ಸಂಘಟನೆಗಳು, ಭೂ ವಿಜ್ಞಾನಿಗಳು ಸೋಷಿಯಲ್ ಮೀಡಿಯಾ, ಯೂಟ್ಯೂಬ್ ವಿಡಿಯೋ ಸೇರಿದಂತೆ ನಾನಾ ವಿಧಾನಗಳ ಮೂಲಕ ಮಣ್ಣಿನ ಸಂರಕ್ಷಣೆ ಮತ್ತು ಮಾನವನ ದುರಾಸೆಯಿಂದಾಗಿ ನಡೆಯುತ್ತಿರುವ ಮಣ್ಣಿನ ಸವಕಳಿ ಬಗ್ಗೆ ಉಪನ್ಯಾಸ , ಕಾರ್ಯಾಗಾರ, ತರಬೇತಿ ನೀಡುತ್ತಾರೆ. ಮಣ್ಣಿನ ರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸುತ್ತಾರೆ.

**ಈ ಬಾರಿಯ ಥೀಮ್**

ಪ್ರತಿ ವರ್ಷ ಒಂದೊಂದು ಥೀಮ್ ಇಟ್ಟುಕೊಂಡು ವಿಶ್ವ ಮಣ್ಣು ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ 'ಸಾಯಿಲ್: ವೇರ್ ಫುಡ್ ಬಿಗಿನ್ಸ್' ಎಂಬ ಅರ್ಥಪೂರ್ಣ ಥೀಮ್ ಇಟ್ಟುಕೊಳ್ಳಲಾಗಿದೆ. ಅಂದರೆ, ಮಣ್ಣು– ಆಹಾರದ ಆರಂಭವಾಗುವ ಸ್ಥಳ ಎಂಬ ಧ್ಯೇಯವಾಕ್ಯ ಇಟ್ಟುಕೊಳ್ಳಲಾಗಿದೆ. ಈ ಜಗತ್ತಿನಲ್ಲಿ ನಾವು ತಿನ್ನುವ ಆಹಾರಕ್ಕೆ ಮಣ್ಣಿನ ಮಹತ್ವನ್ನು ಈ ಮೂಲಕ ಸಾರಲಾಗಿದೆ.

# ರಕ್ತದ ಏರೊತ್ತಡ (High Blood Pressure)

ರೋಗಪರಿಚಯ : ಇತ್ತೀಚೆಗೆ ಈ ರೋಗವು ಅತಿಯಾಗಿ ಹೆಚ್ಚಿದೆ. ಈ ರೋಗಕ್ಕೆ ಹೆದರಿಯೇ ಬಹುತೇಕ ಜನರು ರೋಗವನ್ನು ಹೆಚ್ಚು ಮಾಡಿಕೊಳ್ಳುತ್ತಾರೆಂಬುದು ನನ್ನ ದೀರ್ಘ ಅನುಭವದ ಮಾತು. ಮನಸ್ಸಿನ ಉದ್ರೇಕಕ್ಕೆ ಅವಕಾಶ ಕೊಡದೆ ಶಾಂತಿ ಸಹನೆಗಳಿಂದ ಇರಲು ಕಲಿತರೆ ಈ ರೋಗವನ್ನು ಬಹುಬೇಗ ಹತೋಟಿಗೆ ತರಲು ಸಾಧ್ಯ ಎಂದು ಈ ರೋಗಿಗಳಿಗೆ ನನ್ನ ಸಂದೇಶ, ನಿದ್ರಾನಾಶಕ್ಕೆ ಈ ರೋಗವೂ ಒಂದು ಕಾರಣ. ಈ ರೋಗದಲ್ಲಿ ಮಾನಸಿಕ ಸ್ವಸ್ಥವಿರುವುದಿಲ್ಲ; "ಕ್ಷಣಚಿತ್ತಂ" ಎಂದಂತೆ ಮನಸ್ಸು ಈಗ ಸರಿಯಾಗಿರುವುದು ಇನ್ನೊಂದು ನಿಮಿಷಕ್ಕೆ ಸರಿಯಿರುವುದಿಲ್ಲ; ಏನೋ ಯೋಚನೆ, ಏನೋ ಕಳವಳ ತೋರಿ ಅಶಾಂತಿಯು ತುಂಬಿರುತ್ತದೆ. ಒಂದು ನಿಮಿಷದಲ್ಲಿ ಮೈಯೆಲ್ಲ ಬಿಸಿ ಏರಿದಂತೆ ಕಂಡರೆ ಮತ್ತೊಂದು ನಿಮಿಷದಲ್ಲಿ ಅದೆಲ್ಲೋ ಮಾಯ; ಆಗ ಮತ್ತೆ ತಲೆ ತಿರುಗು, ಮೈಬೆವರು, ನಿತ್ರಾಣ, ಮೈಕೈ ಶೂಲೆ, ನಡುಕ ಕಾಣಿಸುತ್ತದೆ.

ಹೀಗಾಗಿ ರೋಗಿಯ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಸಿಟ್ಟು, ಸೆಡವು, ದೈನ್ಯತೆ, ಆತುರ, ಕಾತರ, ಭಯ, ಕ್ಲೇಶ ದುಃಖಗಳೆಲ್ಲ ಇಲ್ಲಿ ಕೇಂದ್ರೀಕೃತವಾದಂತೆ ಇರುತ್ತದೆ; ಹೀಗಾಗಿ ಈ ರೋಗದಿಂದ ನರಳುತ್ತಿರುವವರ ಸ್ಥಿತಿ ಚಿಂತಾಜನಕ ಆದರೆ ಮನಸ್ಸನ್ನು ಕೊಡವಿ ಅದನ್ನು ತುಳಿದು ನಿಂತಾಗ ಸಹಜವಾದ ಚಿಕಿತ್ಸೆಯಿಂದಲೇ ಅದನ್ನು ಜಯಿಸಲು ಸಾಧ್ಯವೆಂಬುದು ನನ್ನ ಚಿಕಿತ್ಸಾನುಭವ. ಆದುದರಿಂದ ಹೆದರಬೇಡಿ; ಗಾಬರಿಗೊಳ್ಳಬೇಡಿ; ನಿಶ್ಚಿಂತೆಯಿಂದ ಪರಮಾತ್ಮನಲ್ಲಿ ಶರಣಾಗತರಾಗಿ ಚಿಕಿತ್ಸೆಯನ್ನು ಪ್ರಾರಂಭಿಸಿರಿ, ಜೊತೆಗೆ ನಿಮ್ಮ ಆಹಾರ ವ್ಯವಹಾರಗಳನ್ನೂ ಸರಿಪಡಿಸಿಕೊಳ್ಳಿ, ಬಹುತೇಕ ಈ ರೋಗ ತೀರ ಚಿಕ್ಕವರಿಗೆ ಉಂಟಾಗುವುದಿಲ್ಲ. ಪ್ರಾಯ ಪ್ರಬುದ್ಧರಿಗೆ ಹೆಚ್ಚು. ಆದುದ್ದರಿಂದ ನಿಮ್ಮನ್ನು ನೀವು ಅಂಕಿತದಲ್ಲಿಟ್ಟುಕೊಳ್ಳಲು ಕಲಿತರೆ ಮುಂದೆ ಚಿಕಿತ್ಸೆ ಎಲ್ಲವನ್ನೂ ಸರಿಪಡಿಸುತ್ತದೆ.

ನಿಮಗೆ ಚಹಾ, ಕಾಫಿ, ಬೀಡಿ, ಸಿಗರೇಟ್, ಮದ್ಯಪಾನ, ಅತಿಯಾದ ಕರಿದ ತಿಂಡಿಗಳ ವ್ಯಾಮೋಹ, ಅತಿಕಾರ, ಉಪ್ಪುಗಳ ಚಟವಿದೆಯೇ? ನೀವು ಅತಿಕಾಮಿಗಳೇ? ನಿಮ್ಮದು ಅತಿಸಿಟ್ಟಿನ ಸ್ವಭಾವವೇ? ಇವನ್ನೆಲ್ಲ ಬಿಟ್ಟು ಬಿಡಿ–ಮುಗಿದು ಹೋಯ್ತು, ಇಷ್ಟಕ್ಕೆ ನಿಮ್ಮ ಕಾಯಿಲೆಯು ಗುಣವಾಗುತ್ತದೆ. ಕಾಲರ, ಪ್ಲೇಗು, ಹೃದಯ ಸ್ತಂಭನಗಳಂತೆ ಇದು ಕೂಡಲೇ ಪ್ರಾಣದ ಮೇಲೆ ಆಪತ್ತನ್ನು ವಿಪತ್ತನ್ನು ತರುವ ಕಾಯಿಲೆಯಲ್ಲ. ಇದು ನಿಧಾನ ದ್ರೋಹಿರೋಗ. ಆದುದರಿಂದ ನಿಧಾನವಾಗಿ ಸಾವಕಾಶವಾಗಿ, ಧೈರ್ಯದಿಂದ, ನಿಷ್ಠುರತೆಯಿಂದ ಮೇಲಿನ ಚಟಗಳನ್ನೆಲ್ಲ ತುಳಿದು ನಿಂತು ಮನಸ್ಸನ್ನು ಉದ್ರೇಕಗೊಳಿಸುವ ದ್ವೇಷ, ಅಸೂಯೆಗಳನ್ನು ಮರೆಯಿರಿ.

ನಿಮ್ಮ ರೋಗ ಈ ಮೇಲಿನ ಎಲ್ಲ ಕಾರಣಗಳಿಂದಲೇ ಬಂದದ್ದು. ಆಗ ಅದು ನಿಮಗೆ ತಿಳಿಯಲಿಲ್ಲ. ಈಗ ತಿಳಿದಿದೆ. ಆದ್ದರಿಂದ ತಿದ್ದಿಕೊಂಡರಾಯ್ತು. ಮತ್ತೆ ನಿಮ್ಮನ್ನು ಬ್ಲಡ್ ಪ್ರೆಶರ ಬಾಧಿಸುವುದಿಲ್ಲ.

ಅಲ್ಲಿ ಒಳಗೇನಿದೆ ಗೊತ್ತೆ? ಹೃದಯವು ಶರೀರದ ಎಲ್ಲ ಭಾಗಕ್ಕೆ ರಕ್ತವನ್ನು ಹರಿಸುತ್ತದೆ; ಈ ಕಾರ್ಯಕ್ಕೆ ಅದು ಆಕುಂಚನ ಎಂದರೆ ಹಿಗ್ಗುವಿಕೆ ಮತ್ತು ಕುಗ್ಗುವಿಕೆಗೊಳ್ಳುತ್ತಿರುತ್ತದೆ. ಆದರೆ ವಿರುದ್ಧ ಆಹಾರ ವಿಹಾರಗಳಿಂದ, ಚಟಗಳಿಂದ ಹೃದಯುವು ಕುಗ್ಗುವಾಗ


ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ





ರಕ್ತನಾಳಗಳಲ್ಲಿಯ ದೋಷದಿಂದ ರಕ್ತದ ಸುಗಮ ಸಂಚಾರಕ್ಕೆ ಅಡೆತಡೆಯುಂಟಾಗುತ್ತದೆ, ಆಗ ಹೃದಯವು ತನ್ನ ರಕ್ತಪ್ರಸರಣ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಲು ಹೆಚ್ಚು ಒತ್ತಡದಿಂದ ತಳ್ಳಲು ಕಾರಣವೇನು? ರಕ್ತನಾಳದಲ್ಲಿಯ ದೋಷ, ಅರ್ಥಾತ್, ಸಂಕುಚಿತವಾದ ಮಲ; ಅದ್ಯಾಕಾಯಿತು? ಮೇಲೆ ತಿಳಿಸಿದ ಚಟಗಳಿಂದ, ಮದ್ಧ್ಯವಹಾರಗಳಿಂದ ಅದನ್ನು ಬಿಟ್ಟು ಬಿಡಿ–ಎಲ್ಲ ಸರಿಯಾಗುತ್ತದೆ. ಆಗಲೇ ಸಂಚಿತವಾದ ದೋಷ ನಿವಾರಣೆಗೆ ಔಷಧಿ, ಪಥ್ಯ, ಅನುಪಾನ ಅಷ್ಟೆ, ಮತ್ತಿದರಲ್ಲಿ ಭಯದ ಕಾರಣವೇನಿದೆ? ಈಗ ಚಿಕಿತ್ಸೆ ಪ್ರಾರಂಭಿಸಿ,

**ಔಷಧಿ ಚಿಕಿತ್ಸೆ**

1. ಸರ್ಪಗಂಧದ ಬೇರಿನ ವಸ್ತ್ರಗಾಳಿತ ಚೂರ್ಣ ದಿನಕ್ಕೆರಡು ಬಾರಿ ಬೆಳಿಗ್ಗೆ, ಸಂಜೆ 0.625ಗಾಂನಿಂದ 1.25 ಗ್ರಾಂನಂತೆ ಲಿಂಬೆಹಣ್ಣಿನ ರಸ ಮತ್ತು ಜೇನು ಸೇರಿಸಿ ತೆಗೆದುಕೊಂಡರೆ ಬ್ಲಡ್ ಪ್ರೆಶರ್ (ರಕ್ತದ ಒತ್ತಡ) ಪರಿಹಾರವಾಗುತ್ತದೆ. 3–4 ವಾರ.
2. ನಿತ್ಯ ಬೆಳಿಗ್ಗೆ, ರಾತ್ರಿ 30 ಮಿ.ಲೀ. ಹಸಿ ಈರುಳ್ಳಿಯ ರಸದಲ್ಲಿ 30 ಮಿ.ಲೀ. ತುಟ್ಟಿ ಜೇನು ಸೇರಿಸಿ ತೆಗೆದುಕೊಂಡರೆ ರಕ್ತದ ಒತ್ತಡ ಪರಿಹಾರವಾಗುತ್ತದೆ. 3–4 ವಾರ.
3. ಅಕ್ಕಿಯ ತೆಳ್ಳಗಿನ ಗಂಜಿ ಮಾಡಿ ಅದಕ್ಕೆ 15 ಮಿ.ಲೀ. ಬೆಳ್ಳುಳ್ಳಿರಸ, 15 ಮಿ.ಲೀ. ಲಿಂಬೆರಸ, 15 ಮಿ.ಲೀ. ಜೇನು ಸೇರಿಸಿ ನಿತ್ಯ ಎರಡು ಹೊತ್ತು ತೆಗೆದುಕೊಳ್ಳುವುದು; 3–4 ವಾರ.
4. 200 ಮಿ.ಲೀ. ಹಾಲಿನಲ್ಲಿ ಒಂದು ಬೆಳ್ಳುಳ್ಳಿಗಡ್ಡೆಯನ್ನು ಇಡಿಯಾಗಿ ಹಾಕಿ ಇದರಲ್ಲಿ ಒಣದ್ರಾಕ್ಷ 12 ಗ್ರಾಂ ಸೇರಿಸಿ, ಕುದಿಸಿ ರಾತ್ರಿ ಮಲಗುವಾಗ ಆ ಬೆಳುಳ್ಳಿಯನ್ನು ತೆಗೆದು ಹಾಕಿ ದ್ರಾಕ್ಷೆಯನ್ನು ತಿಂದು ಆ ಹಾಲನ್ನು ಕುಡಿದು ಮಲಗಬೇಕು. ನಿತ್ಯ ಒಂದು ಹೊತ್ತು ಮಾತ್ರ ಒಂದೆರಡು ತಿಂಗಳು,
5. ಪ್ರತಿ ಊಟದ ನಂತರ ಬಡೇಸೋಪು 15 ಮಿ.ಲೀ. ಜೊತೆಗೆ ಕರೀಉಪ್ಪು 0.25 ಗ್ರಾಂ ಸೇರಿಸಿ ಚೆನ್ನಾಗಿ ಅಗಿದು ತಿನ್ನಬೇಕು, ಇದರಿಂದ ತಲೆ ಸುತ್ತು, ಶಬ್ದ ಕೂಡ ನಿಲ್ಲುತ್ತದೆ.

ಪಥ್ಯಾಪಥ್ಯ : ಜಡವಾದ ಆಹಾರವನ್ನು ತ್ಯಜಿಸಿ ಲಘುವಾದ ಆಹಾರವನ್ನು ತೆಗೆದುಕೊಳ್ಳುತ್ತಿರಬೇಕು; ತೊಗರಿಬೇಳೆಯ ಸಿಹಿಸಾರು ಅನ್ನ ಒಳ್ಳೆಯದು.

ಸ್ವಯಂವೈದ್ಯ (ತಿರುಕ)
ಪುಸ್ತಕ ಕೃಪೆ



**ಭೇಟಿ**

ನವದೆಹಲಿಯಲ್ಲಿ ಕೇಂದ್ರ ಪ್ರವಾಸೋದ್ಯಮ, ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಜಿ. ಕಿಶನ್ ರೆಡ್ಡಿ ಅವರನ್ನು ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿಯಾದ ದೃಶ್ಯ.



**ಭೇಟಿ**

ಅಗ್ನಿವೀರರ ನೇಮಕಾತಿಯಲ್ಲಿ ವಸತಿ ಪ್ರಮಾಣ ಪತ್ರದ ತಾಂತ್ರಿಕ ಗೊಂದಲದಿಂದ ಹಲವರು ದಾಖಲಾತಿ ಪರಿಶೀಲನೆ ವೇಳೆ ವಂಚಿತರಾಗಿದ್ದರ ಬಗ್ಗೆ ನವದೆಹಲಿಯಲ್ಲಿ ಕೇಂದ್ರ ರಕ್ಷಣಾ ಖಾತೆ ಸಚಿವರಾದ ಶ್ರೀ ರಾಜನಾಥ ಸಿಂಗ ಅವರನ್ನು ಚಿಕ್ಕೋಡಿ ಲೋಕಸಭೆ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಭೇಟಿ ಮಾಡಿದ ದೃಶ್ಯ.




**ಸತ್ಕರಿಸುತ್ತಿರುವುದು**

ನಿಪ್ಪಾಣಿ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಆಯೋಜಿಸಿದ ರಾಜ್ಯ ಹಾಗೂ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಮುಜರಾಯಿ, ಹಜ್ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಸಾಧನೆಗೈದ ವಿದ್ಯಾರ್ಥಿಗಳಿಗೆ ಸತ್ಕಸುತ್ತಿರುವುದು.



**ಪವಮಾನ ಯಜ್ಞ**

ನಿಪ್ಪಾಣಿ ನಗರದಲ್ಲಿ ವಿಶ್ವ ಹಿಂದೂ ಪರಿಷದ್ ಬಜರಂಗದಳ, ನಿಪ್ಪಾಣಿ ತಾಲೂಕ ಘಟಕ ಹಾಗೂ ಜೊಲ್ಲೆ ಗ್ರೂಪ್ ವತಿಯಿಂದ ಶ್ರೀ ಹನುಮಮಾಲಾ ಧಾರಣೆ ಹಾಗೂ ಪವಮಾನ ಯಜ್ಞ ಪೂಜಾ ಕಾರ್ಯಕ್ರಮದಲ್ಲಿ ಜೊಲ್ಲೆ ಪರಿವಾರ ಭಾಗವಹಿಸಿದ ದೃಶ್ಯ.



**ಗೌರವ ನಮನ ಸಲ್ಲಿಸುತ್ತಿರುವುದು.**

ಬೇಡಕಿಹಾಳದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ, ಡಾ. ಬಿ. ಆರ್. ಅಂಬೇಡ್ಕರ್ ಮಹಾಪರಿನಿರ್ವಾಣ ದಿನ ನಿಮಿತ್ಯ ಅಂಬೇಡ್ಕರ್ ಪ್ರತಿಮೆಗೆ ಕರ್ನಾಟಕ ರಾಜ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.



**ಚಾಲನೆ ನೀಡುತ್ತಿರುವುದು**

ನಿಡಸೋಸಿ ಶ್ರೀ ದುರದುಂಡೇಶ್ವರ ಸಿದ್ಧ ಸಂಸ್ಥಾನ ಮಠಕ್ಕೆ ಮುಜರಾಯಿ ಇಲಾಖೆ ವತಿಯಿಂದ 50 ಲಕ್ಷ ರೂ ಮೊತ್ತದಲ್ಲಿ ಸಮುದಾಯ ಭವನ ಕಾಮಗಾರಿಗೆ ಜೊಲ್ಲೆ ದಂಪತಿ ಶಂಕುಸ್ಥಾಪನೆ ನೆರವೇರಿಸಿ ಚಾಲನೆ ನೀಡುತ್ತಿರುವುದು.



**ಮನವಿ ಸ್ವೀಕರಿಸುತ್ತಿರುವುದು**

ನಿಪ್ಪಾಣಿ ಮತಕ್ಷೇತ್ರದ ಸಿದ್ನಾಳ ಗ್ರಾಮದಲ್ಲಿ ಶ್ರೀ 1008 ನೇಮಿನಾಥ ಭಗವಾನ ಜೈನ ಬಸದಿಗೆ ಮುಜರಾಯಿ, ಹಜ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಯವರು ಭೇಟಿ ನೀಡಿ, ಕಮೀಟಿಯವರು ಸಮುದಾಯ ಭವನ ನಿರ್ಮಾಣಕ್ಕಾಗಿ ಸಲ್ಲಿಸಿದ ಮನವಿಯನ್ನು ಸ್ವೀಕರಿಸುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿ ಮತಕ್ಷೇತ್ರದ ಮತ್ತಿವಾಡಿ ಗ್ರಾಮದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ಮಂಜೂರಾದ 1 ಕೋಟಿ 70 ಲಕ್ಷ ರೂ ಮೊತ್ತದಲ್ಲಿ ರಸ್ತೆ ಕಾಮಗಾರಿಗೆ ಮುಜರಾಯಿ, ಹಜ್ ಮತ್ತು ವಕ್ಫ್ ಇಲಾಖೆಯ ಸಚಿವರಾದ ಸೌ. ಶಶಿಕಲಾ ಜೊಲ್ಲೆ ಜಿ ಯವರು ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ